ಧಾರವಾಡದ ಕೆ.ಎಂ.ಎಫ್ ನಷ್ಟ ಅನುಭವಿಸುತ್ತಿರುವ ಬಗ್ಗೆ

1295(1741) ಶ್ರೀ ಬೆಲ್ಲದ ಚಂದ್ರಕಾಂತ್ ಗುರುಪ್ಪ (ಧಾರವಾಡ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕದ ಹವಾಗುಣ, ಪಶು ಸಂಗೋಪನೆ ಮಾಡಲು ಯೋಗ್ಯವಾಗಿರುವುದೇ?

ಆ) ಪಶುಸಂಗೋಪನೆಯಿಂದ ರಾಜ್ಯದ ರೈತ ಸಮುದಾಯದ ಗ್ರಾಮೀಣ ಯುವ ಶಕ್ತಿಗಳಿಗೆ ಸ್ವಯಂ ಉದ್ಯೋಗ ಅವಕಾಶ ಸಿಗುವುದಿಲ್ಲವೇ;

ಇ) ಹಾಗಿದ್ದಲ್ಲಿ ರಾಜ್ಯದ ಜಿಲ್ಲೆಗಳಲ್ಲಿ ಯಾವ ಯೋಜನೆಗಳು ಪ್ರಾಯೋಗಿಕವಾಗಿ ತರಲಾಗಿದೆ ವಿವರ ನೀಡುವುದು?

ಈ) ಧಾರವಾಡದ ಕೆ.ಎಂ.ಎಫ್ ನಷ್ಟ ಅನುಭವಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ವಿವರ ನೀಡುವುದು.

ಉ) ಸದರಿ ಕೆ.ಎಂ.ಎಫ್ ಸಂಸ್ಥೆಯು ಲಾಭದಾಯಕವಾಗಿ ನಡೆಯಲು ಯಾವ ಸೂಕ್ತ ಕ್ರಮಗಳನ್ನು ಕಾಲಬದ್ಧವಾಗಿ ತೆಗೆದುಕೊಳ್ಳಲಾಗುವುದು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಹೌದು.

ಆ) ಸ್ವಯಂ ಉದ್ಯೋಗ ಅವಕಾಶ ರಾಜ್ಯದಲ್ಲಿ ಸಿಗುತ್ತಿದೆ.

ಇ) ಹೈನುಗಾರಿಕೆ, ಕೋಳಿ, ಕುರಿ, ಮೊಲ, ಹಂದಿ, ಸಾಕಾಣಿಕೆಯ ಮತ್ತು ಮೇವು ಬೆಳೆಗಳ ವಿಷಯಗಳಲ್ಲಿ ತರಬೇತಿ ನೀಡಿ ನಾರ್ಬಾಡ್ ಮತ್ತು ಹಣಕಾಸು ಸಂಸ್ಥೆಗಳಿಂದ ಹಣಕಾಸು ನೆರವು ಪಡೆದು ಗ್ರಾಮೀಣ ಯುವಶಕ್ತಿಗೆ ಸ್ವಯಂ ಉದ್ಯೋಗ ಕಲ್ಪಿಸಲಾಗುತ್ತಿದೆ.

ಈ) ಧಾರವಾಡ ಹಾಲು ಒಕ್ಕೂಟವು ನಷ್ಟವನ್ನು ಅನುಭವಿಸುತ್ತಿದೆ. ಇದು ಕರ್ನಾಟಕ ಹಾಲು ಮಹಾಮಂಡಳಿಯ ಒಂದು ಸದಸ್ಯ ಒಕ್ಕೂಟವಾಗಿರುತ್ತದೆ ವಿನಹಃ ಕರ್ನಾಟಕ ಹಾಲು ಮಹಾ ಮಂಡಳಿಯ ಘಟಕವಲ್ಲ. 31-3-2002ರ ಅಂತ್ಯಕ್ಕೆ ಧಾರವಾಡ ಹಾಲು ಒಕ್ಕೂಟದ ಕ್ರೋಢೀಕೃತ ನಿವ್ವಳ ನಷ್ಟ ರೂ. 832.16 ಲಕ್ಷಗಳಾಗಿದ್ದು ಮತ್ತು ನಗದು ನಷ್ಟ ರೂ. 273.43 ಲಕ್ಷಗಳಾಗಿದೆ.

ಉ) ಈ ನಿಟ್ಟಿನಲ್ಲಿ ಮುಖ್ಯವಾಗಿ ಒಕ್ಕೂಟವು ಕ್ರಮ ಜರುಗಿಸಬೇಕಾಗುತ್ತದೆ. ಒಳ್ಳೆಯ ಮಾರುಕಟ್ಟೆ ವ್ಯವಸ್ಥೆಯಿಂದ ಹೆಚ್ಚಿನ ಮಾರಾಟ ಮಾಡುವುದು ಆಡಳಿತಾತ್ಮಕ ವೆಚ್ಚದ ಇಳಿತ ಮತ್ತು ದಕ್ಷತೆಯ ಸುಧಾರಣೆ ಮಾಡುವುದು ಇವುಗಳು ಮುಖ್ಯವಾದ ಕ್ರಮಗಳು.

ರಾಜ್ಯದಲ್ಲಿನ ಪಶು ವೈದ್ಯಕೀಯ ಮಹಾವಿದ್ಯಾನಿಲಯಗಳ ವಿವರ

1297(1748) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿಯ ಪಶು ಸಂಗೋಪನೆಯ ಮಹಾ ವಿದ್ಯಾಲಯಗಳ ವಿವರ ತಿಳಿಸುವುದು; ಪ್ರತಿ ವಿಶ್ವವಿದ್ಯಾಲಯದಿಂದ ಹೊರಬರುವ ಪದವೀಧರರ ಅಭ್ಯರ್ಥಿಗಳ ವಿವರ ನೀಡುವುದು?

ಆ) ರಾಜ್ಯದಲ್ಲಿ ಪ್ರತಿ ಪಶುವೈದ್ಯ ಆಸ್ಪತ್ರೆಗಳ ವಿವರದ ಜೊತೆ ಅವುಗಳಲ್ಲಿ ಕೆಲಸ ಮಾಡುತ್ತಿರುವ ಮತ್ತು ಖಾಲಿ ಇರುವ ಹುದ್ದೆಗಳ ಮಾಹಿತಿ ನೀಡುವುದು?

ಇ) ರಾಜ್ಯದಲ್ಲಿ ಹೊಸ ಪಶು ವೈದ್ಯಕೀಯ ಮಹಾವಿದ್ಯಾಲಯಗಳನ್ನು ಸ್ಥಾಪಿಸುವ ಯೋಜನೆ ಇದೆಯೇ?

ಈ) ಪಶು ಸಂಗೋಪನೆ ಇನ್ನೂ ಅಭಿವೃದ್ಧಿ ಪಡಿಸಲು ತಳಿಗಳ ಅಭಿವೃದ್ಧಿಪಡಿಸಲು ರಾಜ್ಯದಲ್ಲಿ ವಿಶ್ವವಿದ್ಯಾಲಯದ ಅವಶ್ಯಕತೆ ಇರುವುದನ್ನು ಸರ್ಕಾರ ಗಮನಿಸಿದೆಯೇ? ವಿವರ ನೀಡುವುದು?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಬೆಂಗಳೂರು ಮತ್ತು ಬೀದರ್‌ನಲ್ಲಿ ಕ್ರಮವಾಗಿ ಒಂದು ಪಶುವೈದ್ಯಕೀಯ ಮಹಾವಿದ್ಯಾಲಯ ಇದೆ.

ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು (ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು).	ಸುಮಾರು 55-60 ಪದವೀಧರರು (ವಾರ್ಷಿಕ)
ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ್, (ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ).	ಸುಮಾರು 55-60 ಪದವೀಧರರು (ವಾರ್ಷಿಕ)

ಆ) ತುಂಬಿರುವ ಹುದ್ದೆ : 1727
ಖಾಲಿ ಹುದ್ದೆ : 312
ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ಕೃಷಿ ವಿಶ್ವವಿದ್ಯಾನಿಲಯ, ಧಾರವಾಡಕ್ಕೆ ಒಳಪಟ್ಟಂತೆ ಗದಗದಲ್ಲಿ ಒಂದು ಪಶುವೈದ್ಯಕೀಯ ಮಹಾವಿದ್ಯಾಲಯವನ್ನು ಸ್ಥಾಪಿಸಲು ಪ್ರಸ್ತಾವನೆಯನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ಸ್ವೀಕರಿಸಲಾಗಿದೆ.

ಈ) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಅನುಬಂಧ

ಪಶು ಆಸ್ಪತ್ರೆಗಳಲ್ಲಿರುವ ಭರ್ತಿ ಮತ್ತು ಖಾಲಿ ಹುದ್ದೆಗಳ ಮಾಹಿತಿ

ಒಟ್ಟು ಪಶು ಆಸ್ಪತ್ರೆಗಳು : 294

ಕ್ರಮ ಸಂಖ್ಯೆ	ಸಿಬ್ಬಂದಿ ವಿವರ	ಭರ್ತಿ	ಖಾಲಿ
1	2	3	4
1.	ಸಹಾಯಕ ನಿರ್ದೇಶಕರು	277	17
2.	ಪಶು ವೈದ್ಯಾಧಿಕಾರಿಗಳು	250	44
3.	ಪಶು ವೈದ್ಯ ಮೇಲ್ವಿಚಾರಕರು	116	82
4.	ಹಿರಿಯ ಪಶು ವೈದ್ಯ ಪರೀಕ್ಷಕರು	-	2
5.	ಪಶುವೈದ್ಯಕೀಯ ಪರೀಕ್ಷಕರು	115	11
6.	ಪಶುವೈದ್ಯ ಸಹಾಯಕರು	149	55
7.	ಪ್ರಥಮ ದರ್ಜೆ ಸಹಾಯಕರು	30	3
8.	ದ್ವಿತೀಯ ದರ್ಜೆ ಸಹಾಯಕರು	92	12
9.	ವಾಹನ ಚಾಲಕರು	110	43
10.	'ಡಿ' ದರ್ಜೆ ಸಹಾಯಕರು	588	43
	ಒಟ್ಟು:	1727	312